**ಸಾಕ್ಷಿಯನ್ನು ದಿನಾಂಕ 30.08.2023 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಟಿ ಎನ್ ಎಸ್ ವಕೀಲರಿಂದಃ**

ದಾವಾ ಸ.ನಂ.29/3 ವಿಸ್ತೀರ್ಣ 3 ಎಕರೆ 3 ಗುಂಟೆ ಜಮೀನು 1 ನೇ ಪ್ರತಿವಾದಿಯ ತಾಯಿಗೆ ಮಾರಾಟ ಮಾಡುವ ಮೊದಲು ಆ ಜಮೀನು ಯಾರಿಗೆ ಸೇರಿತ್ತು ಎಂದರೆ ನನ್ನ ತಂದೆಗೆ 1 ಎಕರೆ 2 ಗುಂಟೆ ಜಮೀನು ಮಾತ್ರ ಸೇರಿತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಾಯಿಗೆ ದಿನಾಂಕ 07.08.1969 ರಲ್ಲಿ ಕ್ರಯಪತ್ರ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ 1 ನೇ ಪ್ರತಿವಾದಿಯ ತಾಯಿಗೆ ಎಷ್ಟು ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾಯಿಗೆ 1 ಎಕರೆ 2 ಗುಂಟೆ ಜಮೀನನ್ನು ನಮ್ಮ ತಂದೆ ಮಾರಾಟ ಮಾಡಿದ್ದರು ಎಂದು ಯಾವ ದಾಖಲೆಯನ್ನು ನೋಡಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ.

2. ದಿನಾಂಕ 07.08.1969 ರಲ್ಲಿ ನಾನು ಮೈನರ್ ಆಗಿದ್ದು, ನನ್ನ ತಂದೆ ನನ್ನ ಪರವಾಗಿ ಮತ್ತು ಅವರ ಪರವಾಗಿ ಕ್ರಯಪತ್ರವನ್ನು 1 ನೇ ಪ್ರತಿವಾದಿಯ ತಾಯಿಗೆ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ಎಕರೆ 3 ಗುಂಟೆ ಜಮೀನಿನ ದಕ್ಷಿಣದ ಕಡೆ ನಮ್ಮ ತಂದೆ 1 ನೇ ಪ್ರತಿವಾದಿಯ ತಾಯಿಗೆ 1 ಎಕರೆ 5 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ಎಕರೆ 5 ಗುಂಟೆ ಜಮೀನನ್ನು ಮಾರಾಟ ಮಾಡಿದ ಬಳಿಕ ಉಳಿದ ಜಮೀನನ್ನು ನೀವು ಅಥವಾ ನಿಮ್ಮ ತಂದೆ ಎಂ.ಜೆಡ್.ಖಾನ್ ರವರಿಗೆ ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. 1 ಎಕರೆ 5 ಗುಂಟೆ ಜಮೀನನ್ನು ಮಾರಾಟ ಮಾಡಿದ ಬಳಿಕ ಉಳಿದ ಜಮೀನನ್ನು ಯಾರು ಯಾವಾಗ ಮಾರಾಟ ಮಾಡಿದ್ದಾರೆ ಎಂದು ನಾನು ಇದುವರೆಗೂ ನೋಡಿಲ್ಲ.

ಸ.ನಂ.29/3 ರ ಮೇಲೆ ಈ ಕೇಸನ್ನು ಹೊರತುಪಡಿಸಿ ಬೇರೆ ಎಷ್ಟು ಕೇಸುಗಳು ಇವೆ ಎಂದರೆ ಸಾಕ್ಷಿ ಸ.ನಂ.29/3 ಎ ಮೇಲೆ ಇದೇ ನ್ಯಾಯಾಲಯದಲ್ಲಿ ಇನ್ನೊಂದು ಪ್ರಕರಣ ಇದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಾಯಿಗೆ ಸ.ನಂ.29/3 ನ್ನು ಮಾರಾಟ ಮಾಡಿದ ನಂತರ ಸ.ನಂ.29/3 ಬಿ ಆಗಿದೆ ಎಂದರೆ ಸಾಕ್ಷಿ ನಮಗೆ 2 ಗುಂಟೆ ಅಗ್ರಿಮೆಂಟ್ ಆಗಿದೆ ಎಂದು ನುಡಿಯುತ್ತಾರೆ.

4. ಎಂ.ಜೆಡ್.ಖಾನ್ ರವರಿಗೆ ಮಾರಾಟ ಮಾಡಿದ ಜಮೀನು ಸ.ನಂ.29/3 ಎ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.29/3 ಎ ಮೇಲೆ ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿ. ಸಾಕ್ಷಿ ಸ್ವತಃ ಎಂ.ಜೆಡ್.ಖಾನ್ ರವರಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸ.ನಂ.29/3 ಎ ರ ಮೇಲೆ ಯಾರು ಯಾರು ಕೇಸುಗಳನ್ನು ಸಲ್ಲಿಸಿದ್ದಾರೆ ಎಂದು ಅವರ ಹೆಸರುಗಳು ನನಗೆ ಗೊತ್ತಿಲ್ಲ. 10 ವರ್ಷಗಳಿಂದ ಆ ಕೇಸುಗಳು ನಡೆಯುತ್ತಿವೆ. ಸ.ನಂ.29/3 ಎ ಪರಿವರ್ತನೆಯಾಗಿ ಸೈಟುಗಳನ್ನು ವಿಂಗಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಉಳುಮೆ ಭೂಮಿ ಎಂದು ನುಡಿಯುತ್ತಾರೆ. ಸೈಟುಗಳನ್ನು ಖರೀದಿಸಿದವರು ನಾವು ಸ್ವಾದೀನಕ್ಕೆ ತೊಂದರೆ ನೀಡುತ್ತಿದ್ದೇವೆ ಎಂದು ನಮ್ಮ ಮೇಲೆ ಕೇಸುಗಳನ್ನು ಸಲ್ಲಿಸಿದ್ದಾರೆ ಎಂದರೆ ಸರಿ.

5. ಸ.ನಂ.29/3 ಎ ರಲ್ಲಿ ನನಗೆ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿ 2 ಗುಂಟೆ ಜಮೀನು ಕರಾರು ಆಗಿದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಾಯಿಗೆ ಮತ್ತು ಎಂ.ಜೆಡ್.ಖಾನ್ ರವರಿಗೆ ಜಮೀನನ್ನು ಮಾರಾಟ ಮಾಡಿದ ನಂತರ ಸ.ನಂ.29/3 ಎ ನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಸ.ನಂ.29/3 ಎ ಯಾರ ಹೆಸರಿಗೆ ದುರಸ್ತಿಯಾಗಿ ಖಾತೆ, ಪಹಣಿ

ಆಗಿದೆ ಎಂದರೆ ಸಾಕ್ಷಿ ದುರಸ್ತಿ ಎಂದರೆ ನನಗೆ ಗೊತ್ತಿಲ್ಲ, ನಮ್ಮ ಹೆಸರಿಗೆ ದಾಖಲೆ ಇದೆ ನಾವು ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

6. ಸ.ನಂ.29/3 ಎ ಸರ್ವೇ ದಾಖಲೆ ಯಾರ ಹೆಸರಿನಲ್ಲಿದೆ ಎಂದು ನಾನು ನೋಡಿಲ್ಲ. 1 ನೇ ಪ್ರತಿವಾದಿಯ ತಾಯಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ತಾಯಿ ಸ.ನಂ.29/3 ಬಿ ನಲ್ಲಿ ಯಾರು ಯಾರಿಗೆ ಎಷ್ಟು ಜಮೀನನ್ನು ಕರಾರು ಮಾಡಿಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ನನಗೆ 2 ಗುಂಟೆ ಜಮೀನನ್ನು ಕರಾರು ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಯಾರ ಯಾರ ಹೆಸರಿಗೆ ಎಷ್ಟು ಜಮೀನು ಬರುತ್ತಿದೆ ಎಂದು ನೋಡಿದ್ದೀರಾ ಎಂದರೆ ಸಾಕ್ಷಿ 2 ಗುಂಟೆ ಜಮೀನಿನ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 2 ಗುಂಟೆ ಜಮೀನು ಆರ್ ಟಿ ಸಿ ನಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ.

7. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಪ್ರತಿವಾದಿಗಳು ನನಗೆ ಕ್ರಯದ ಕರಾರು ಆದಾಗ ನೀಡಿದ್ದರು. ನನಗೆ ಕನ್ನಡ ಓದಲು ಬರುತ್ತದೆ. ನನ್ನ ಹೆಂಡತಿ 2 ಬಾರಿ ನಗರ ಸಭೆಯ ಸದಸ್ಯರಾಗಿದ್ದರು. ನಿಪಿ 2 ಆರ್ ಟಿ ಸಿಯಲ್ಲಿ 1 ನೇ ಪ್ರತಿವಾದಿ ಶ್ರೀನಿವಾಸ್ ಮತ್ತು ಅವರ ಸಂಬಂಧಿಕರ ಹೆಸರಿನಲ್ಲಿ ಬರುತ್ತಿದೆ. ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸುವ ಮೊದಲು 1 ಎಕರೆ 5 ಗುಂಟೆ ಪೈಕಿ 2 ಗುಂಟೆ ಜಮೀನು ಯಾವ ಭಾಗದಲ್ಲಿ ಬರುತ್ತದೆ ಎಂಬ ಬಗ್ಗೆ ಸ್ಕೆಚ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕರಾರು ಮಾಡುವಾಗ ಪ್ರತಿವಾದಿಗಳೇ ಅಳತೆ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಆ 2 ಗುಂಟೆ ಜಮೀನು 1 ಎಕರೆ 5 ಗುಂಟೆ ಪೈಕಿ ದಕ್ಷಿಣ ದಿಕ್ಕಿನಲ್ಲಿ ಬರುತ್ತದೆ.

8. 1 ನೇ ಪ್ರತಿವಾದಿಯ ತಾಯಿ 1 ಎಕರೆ 5 ಗುಂಟೆ ಪೈಕಿ ತಲಾ 2 ಗುಂಟೆ ತನ್ನ ಹೆಣ್ಣು ಮಕ್ಕಳಿಗೆ ದಾನಪತ್ರ ಮಾಡಿ ಮದ್ಯದಲ್ಲಿ 20 ಅಡಿ ರಸ್ತೆಯನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮಗೆ ದಕ್ಷಿಣದ ಕಡೆ 2 ಗುಂಟೆ ಜಮೀನನ್ನು ಕ್ರಯದ ಕರಾರು ಮಾಡಿಕೊಟ್ಟಿದ್ದಾರೆ ಮತ್ತು ಉತ್ತರದ ಕಡೆ ರಸ್ತೆ ಇದೆ ಎಂದು ನುಡಿಯುತ್ತಾರೆ. ರಸ್ತೆ ಆದ ನಂತರ 1 ನೇ ಪ್ರತಿವಾದಿಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಮಗೆ 2 ಗುಂಟೆ ಜಮೀನು ಮತ್ತು ಬೇರೆಯವರಗೆ 5 ಗುಂಟೆ ಜಮೀನನ್ನು ಕ್ರಯದ ಕರಾರು ಮಾಡಿಕೊಡುವಾಗ ಸ್ಕೆಚ್ ನ್ನು ಮಾಡಿಕೊಟ್ಟಿದ್ದರಾ ಎಂದರೆ ಸಾಕ್ಷಿ ಸರ್ವೇಯರ್ ರವರನ್ನು ಕರೆಸಿ ಅಳತೆ ಮಾಡಿಸಿ ನಮಗೆ 2 ಗುಂಟೆ ಕರಾರು ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸರ್ವೇಯರ್ ರವರು ಆ ಸಮಯದಲ್ಲಿ ಸ್ಕೆಚ್ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 5 ಗುಂಟೆ ಜಮೀನನ್ನು ಯಾರಿಗೆ ಕ್ರಯದ ಕರಾರು ಮಾಡಿಕೊಟ್ಟರು ಎಂದು ನನಗೆ ಗೊತ್ತಿಲ್ಲ. ಬೇರೆಯವರಿಗೆ 5 ಗುಂಟೆ ಜಮೀನನ್ನು ನನ್ನ 2 ಗುಂಟೆ ಜಮೀನಿನ ದಕ್ಷಿಣದ ಕಡೆ ಮಾಡಿಕೊಟ್ಟಿದ್ದರು.

9. ನನಗೆ ಕ್ರಯದ ಕರಾರು ಮಾಡಿದ 2 ಗುಂಟೆ ಜಮೀನಿನ ದಕ್ಷಿಣದ ಕಡೆ 1 ನೇ ಪ್ರತಿವಾದಿಗೆ ಸೇರಿದ ಜಮೀನು ಇದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಾನು ಈಗ ಹೇಳಿದ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ತೋರಿಸಿದ್ದೀರಾ ಎಂದರೆ ಸಾಕ್ಷಿ ಕ್ರಯದ ಕರಾರಿನಲ್ಲಿ ಚೆಕ್ಕುಬಂದಿ ಇದೆ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ಹೇಳಿರುವ ನೊಂದಾಯಿತ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದೇ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಕ್ರಯದ ಕರಾರು ರಿಜಿಸ್ಟರ್ ಆಗಿದೆಯೋ ಇಲ್ಲವೋ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಸದರಿ ದಾಖಲೆ ರಿಜಿಸ್ಟರ್ ಆಗಿಲ್ಲ ಎಂದು ನುಡಿಯುತ್ತಾರೆ.

10. ಕೇಸನ್ನು ದಾಖಲಿಸುವಾಗ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿದ್ದೇನೆ. ವಾದಪತ್ರದಲ್ಲಿರುವ ವಿಚಾರವನ್ನು ಸಹಿ ಹಾಕುವ ಮೊದಲು ತಿಳಿದುಕೊಂಡಿಲ್ಲ. ದಿನಾಂಕ 18.01.2018 ರಂದು ನೊಂದಾಯಿತ ಕ್ರಯದ ಕರಾರು ಆಗಿದೆ ಎಂದು ವಕೀಲರಿಗೆ ಹೇಳಿ ಬರೆಸಿದ್ದೇನೆ. ದಿನಾಂಕ 18.01.2018 ರಂದು ಆದ ನೊಂದಾಯಿತ ಕ್ರಯದ ಕರಾರು ಪತ್ರ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಇದೆ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

11. ಮೊದಲನೇ ಬಾರಿ ವ್ಯಾಪಾರಕ್ಕೆ ಪ್ರತಿವಾದಿಗಳು ಯಾವಾಗ ಬಂದರು ಎಂದು ನನಗೆ ನೆನಪಿಲ್ಲ. ವ್ಯಾಪಾರ 2 ರಿಂದ 3 ದಿನಗಳ ಕಾಲ ಕ್ರಯದ ಕರಾರು ಆಗುವ ಮೊದಲು ನಡೆದಿತ್ತು. ದಿನಾಂಕ 18.01.2018 ರಂದು ಮಾತುಕತೆ ಪೂರ್ಣಗೊಂಡಿತ್ತು. ಬೆಳಗ್ಗೆ ಮಾತುಕತೆ ಮುಗಿದಿತ್ತು, ಮದ್ಯಾಹ್ನ 3 ಗಂಟೆಗೆ ಕ್ರಯದ ಕರಾರು ಆಯಿತು. ಸ್ಟಾಂಪ್ ವೆಂಡಾರ್ ಚಂದ್ರಶೇಖರ್ ರವರ ಬಳಿ ತಯಾರು ಮಾಡಿಸಿದ್ದೇವು. 3 ಗಂಟೆಯ ಸುಮಾರಿಗೆ ಚಂದ್ರಶೇಖರ್ ರವರ ಕಚೇರಿ ಬಳಿ ನಾವು ಇದ್ದೇವು. 4 ಗಂಟೆಗೆ ಕ್ರಯದ ಕರಾರು ತಯಾರಿಸಿ ಮುಗಿದಿತ್ತು. ಪತ್ರವನ್ನು ನಾವು 3 ಗಂಟೆಗೆ ಹೋದ ಬಳಿಕ ತಂದಿದ್ದರು. ಸ್ಟಾಂಪ್ ಪೇಪರ್ ನ್ನು ಸ್ಟಾಂಪ್ ವೆಂಡಾರ್ ತರಿಸಿಕೊಟ್ಟರು. ಸ್ಟಾಂಪ್ ಪೇಪರ್ 3 ಗಂಟೆಯ ನಂತರ ತರಿಸಿಕೊಟ್ಟರು. ಹಣವನ್ನು ಪ್ರತಿವಾದಿಯರಿಗೆ ಸ್ಟಾಂಪ್ ವೆಂಡಾರ್ ಎದುರಿಗೆ ನೀಡಿದ್ದೇವು. ಹಣ ನೀಡುವಾಗ ಸ್ಟಾಂಪ್ ವೆಂಡಾರ್ ಮತ್ತು ಪ್ರತಿವಾದಿಗಳು ಕರೆದುಕೊಂಡು ಬಂದ ಮಂಜುನಾಥ ಮತ್ತು ಆದಿ ಮೂರ್ತಿ ಎಂಬ ಇಬ್ಬರು ಸಾಕ್ಷಿದಾರರು ಇದ್ದರು. ಮಂಜುನಾಥರವರು ನನ್ನ ಅಕ್ಕನ ಮಗ ಎಂದರೆ ನನಗೆ ಸಂಬಂಧ ಇಲ್ಲ. ಆದಿಮೂರ್ತಿ ನನಗೆ ಸಂಬಂಧಿಕನಲ್ಲ. ಮಂಜುನಾಥ್ ರವರು ಚಿಂತಾಮಣಿಯ

ಚೌಡರೆಡ್ಡಿಪಾಳ್ಯದವರು ಮತ್ತು ಆದಿ ಮೂರ್ತಿ ಚಿಂತಾಮಣಿಯ ಸೊಣ್ಣಶೆಟ್ಟಿಹಳ್ಳಿಯವರು. ನನ್ನ ಮನೆ ಸೊಣ್ಣಶೆಟ್ಟಿಹಳ್ಳಿಯಲ್ಲಿದೆ.

12. ವಾದಪತ್ರದಲ್ಲಿ ನಾನು ಮತ್ತು ಪ್ರತಿವಾದಿಯರು ಸೇರಿ ಬರವಣಿಗೆಯನ್ನು ಮಾಡಿದ್ದೇವು ಎಂದು ವಾದಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಆ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ. ಸ್ಟಾಂಪ್ ವೆಂಡಾರ್ ಬಳಿ ಬರವಣಿಗೆಯನ್ನು ಮಾಡಿದ್ದೇವು ಎಂದು ವಕೀಲರಿಗೆ ಹೇಳಿ ವಾದಪತ್ರದಲ್ಲಿ ಬರೆಸಿದ್ದೇವೆ. ಪ್ರತಿವಾದಿಗಳು ಬೋರ್ ವೆಲ್ ಹಾಕಬೇಕು ಮತ್ತು ಬಿದ್ದುಹೋಗಿರುವ ಮನೆಯನ್ನು ನಿರ್ಮಿಸಬೇಕು ಎಂದು ಮಾರಾಟ ಮಾಡುವಾಗ ನನಗೆ ತಿಳಿಸಿದ್ದರು. ಆ ವಿಚಾರವನ್ನು ಕ್ರಯದ ಕರಾರಿನಲ್ಲಿ ಬರೆಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.